ದಿನಾಂಕ: 15-09-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿಸವಾಲು: ಶ್ರೀ ಎಸ್ ಆರ್ ಆರ್ ವಕೀಲರಿಂದ :-**

1. ಈಗ್ಗೆ 23 ವರ್ಷದಿಂದೆ ನಾನು ಸಬ್ ರಜಿಸ್ಟ್ರೇಶನ್ ಆಫೀಸಿನಲ್ಲಿ ಹೆಬ್ಬೆಟ್ಟು ಸಹಿ ಹಾಕಿ ನನ್ನ ಹೆಸರಿಗೆ ಖರೀದಿ ಮಾಡಿಕೊಂಡಿರುತ್ತೇನೆ. ಚಂದ್ರ್ಯಾ ಸೋಮ್ಯಾ ಝುಂಪ್ಯಾ ಮತ್ತು ಭೀಮಪ್ಪ ನಾನು ಹೊಲ ಖರೀದಿ ಮಾಡಿಕೊಂಡ 3 ವರ್ಷದ ನಂತರ ತೀರಿಕೊಂಡಿರುತ್ತಾರೆ. ನಾನು ಭೀಮಪ್ಪನ ಕಡೆಯಿಂದ ಹೊಲವನ್ನು ಖರೀದಿಸಿರುತ್ತೇನೆ. ನಾನು ಭೀಮಲ್ಯಾನ ಆಸ್ತಿಯನ್ನು ಖರೀದಿಸಿರುತ್ತೇನೆ. ನಾನು ಖರೀದಿಸುವಾಗ ಮೇಲೆ ಹೇಳಿದ ಜನರು ಮತ್ತು ಇತರರು ಸೇರಿ ಒಟ್ಟು 6 ಜನರು ಇದ್ದರು. ನನ್ನನ್ನು ಬಿಟ್ಟು ತೇಜಪ್ಪ ಮತ್ತು ಶಿವಪ್ಪ ಇದ್ದರು. ಒಟ್ಟು 24 ಎಕರೆ 25 ಗುಂಟೆ ಆಸ್ತಿ ಇದೆ ಎಂದರೆ ಸರಿ. ನಾನು 04 ಎಕರೆ 04 ಗುಂಟೆ ಆಸ್ತಿ ಖರೀದಿಸಿರುತ್ತೇನೆ. ಸದರಿ ಆಸ್ತಿ ರಾಂಪೂರ ಶಿಮಾಂತರದಲ್ಲಿ ಬರುತ್ತದೆ. 33000/– ಹಣ ಕೊಟ್ಟು ಆಸ್ತಿ ಖರೀದಿಸಿರುತ್ತೇನೆ. ನಾನು ಜಮೀನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಖರೀದಿಗೆ ಕೊಟ್ಟವರು 25 ವರ್ಷದಿಂದೆ ತೀರಿಕೊಂಡಿದ್ದಾರೆ ನಾನು ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಖರೀದಿ ಪತ್ರ ಹಾಕಿದ್ದೇನೆಂದರೆ ಸರಿಯಲ್ಲ. ಇವತ್ತಿನವರೆಗೂ ಬೀಮಪ್ಪ ತಂದೆ ಮುನ್ನೇ ಕಬ್ಜೆಯಲ್ಲಿ ಇದ್ದಾನೆಂದರೆ ಸರಿಯಲ್ಲ. ನಾನು ಜಮೀನಿನ ಮಾಲೀಕನೆ ಅಲ್ಲ ಎಂದರೆ ಸರಿಯಲ್ಲ. ನಾನು 1999 ರಲ್ಲಿ ಖರೀದಿಸಿದ್ದರೂ ಕೂಡಾ 20–07–2019 ರಲ್ಲಿ ಮುಟೇಶನ್ ಮಾಡಲು ಅರ್ಜಿ ಹಾಕಿದ್ದೇನೆ ಎಂದರೆ ಸಾಕ್ಷಿಯು ಆಗಲೇ ಮುಟೇಶನ್ ಆಗಿದೆ ಎಂದು ನುಡಿಯುತ್ತಾರೆ. ನನ್ನ ಹೆಸರಿಗೆ ಪಹಣಿ ಬಂದು 1 ವರೆ ವರ್ಷ ಆಗಿದೆ ಎಂದು ನುಡಿಯುತ್ತಾರೆ.

2. ನಾನು ಜಮೀನನ್ನು ಖರೀದಿ ಮಾಡಿಲ್ಲ ಮತ್ತು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಈಗ ವಾದಿಯೇ ಸ್ವಾಧೀನ ಹೊಂದಿದ್ದಾನೆಂದರೆ ಸರಿಯಲ್ಲ. ವಾದಿಯ ಜಮೀನು ಕಬಳಿಸಲು ಸುಳ್ಳು ಖರೀದಿ ಪತ್ರ ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.
**ಸಹಿ/–**
**( ಚಂದ್ರಶೇಖರ ಪಿ. ದಿಡ್ಡಿ )**
ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗುರು.